# ಮತ್ತೊಂದು ‘ಮುಂಗಾರು ಮಳೆ’ ನಿರೀಕ್ಷೆಯಲ್ಲಿ ಭಟ್ಟರು



**2006**ರಲ್ಲಿ ತೆರೆಕಂಡ ‘ಮುಂಗಾರು ಮಳೆ’ ಸಿನಿಮಾ, ಕನ್ನಡ ಸಿನಿಮಾರಂಗದಲ್ಲಿ ಹೊಸ ಅಲೆಯ ರೊಮ್ಯಾಂಟಿಕ್ ಡ್ರಾಮಾ ಆಗಿ ಗುರುತಿಸಿಕೊಂಡಿತ್ತು. ಪ್ರೇಮಕಥೆಯ ಸಿನಿಮಾಗಳ ಶೈಲಿಯನ್ನು ಮರುವ್ಯಾಖ್ಯಾನಿಸಿತ್ತು ಕೂಡ. ಸಿನಿಮಾ ತೆರೆಕಂಡು ಸುಮಾರು 19 ವರ್ಷಗಳಾಗಿವೆ.

ಸದ್ಯ ಯೋಗರಾಜ್ ಭಟ್ಟರ ‘ಮನದ ಕಡಲು’ ಸಿನಿಮಾ ಬಿಡುಗಡೆಗೆ ಸಿದ್ಧಗೊಂಡಿದ್ದು, ‘ಮುಂಗಾರು ಮಳೆ’ ಸಿನಿಮಾದಂತೆಯೇ ಪ್ರಭಾವ ಬೀರುವ ನಿರೀಕ್ಷೆಯನ್ನು ನಿರ್ದೇಶಕ ಯೋಗರಾಜ ಭಟ್ ವ್ಯಕ್ತಪಡಿಸಿದ್ದಾರೆ.



‘‘ಮನದ ಕಡಲು’ ಸಿನಿಮಾ ಕೂಡ ಕನ್ನಡ ಸಿನಿಮಾರಂಗದಲ್ಲಿ ಒಂದು ಪ್ರಮುಖ ಗುರುತಾಗಲಿದೆ. ಇದು ಹೊಸ ‘ಮುಂಗಾರು ಮಳೆ’ಯಾಗುತ್ತದೆ ಎನ್ನುವ ನಂಬಿಕೆ ನನಗಿದೆ. ಪ್ರೇಕ್ಷಕರ ಸಿನಿಮಾ ನೋಡುವ ಧಾಟಿ, ಅಭಿರುಚಿ ಶಿಫ್ಟ್ ಆಗುತ್ತಿರುವ ಈ ಸಮಯದಲ್ಲಿ ಈ ಸಿನಿಮಾ ಜನರನ್ನು ಥಿಯೇಟರ್‌ಗಳಿಗೆ ಮರಳಿ ಕರೆದುಕೊಂಡು ಬರುವ ವಿಶ್ವಾಸ ನನಗಿದೆ’’ ಎಂದು ಆತ್ಮವಿಶ್ವಾಸದಿಂದ ಮಾತನಾಡಿದ್ದಾರೆ.

‘ಈ ಸಿನಿಮಾ ಹಾಗೂ ಇದರ ಕ್ಲೈಮ್ಯಾಕ್ಸ್ ಜನರನ್ನು ಥಿಯೇಟರ್‌ಗೆ ಬಂದು ನೋಡುವಂತೆ ಪ್ರೇರೇಪಿಸುತ್ತದೆ’ ಎಂದಿದ್ದು, 20ರ ಹರೆಯದವರ ತ್ರಿಕೋನ ಕಥೆ ಪ್ರೇಕ್ಷಕರನ್ನು ಭಾವನಾತ್ಮಕ ಪ್ರಯಾಣ ಮಾಡಿಸುತ್ತದೆ ಎಂದು ಹೇಳಿದ್ದಾರೆ.

‘‘ಚಿತ್ರದ ಸಂಗೀತವೂ ಈ ಸಿನಿಮಾದ ಹೃದಯ. ಸಂಗೀತ ನಿರ್ದೇಶಕ ವಿ. ಹರಿಕೃಷ್ಣನ್ ಜಾದೂಗಾರ. ‘ಮನದ ಕಡಲು’ ಸಿನಿಮಾದಲ್ಲಿ ಮತ್ತೆ ಆ ಜಾದೂ ಪ್ರದರ್ಶಿಸಿದ್ದಾರೆ’’ ಎಂದು ಪ್ರಶಂಸೆಯ ಮಳೆ ಸುರಿಸಿದ್ದಾರೆ. ■



## ಸುಕೃತಾ ಅವಲೋಕನ

‘ಜಟ್ಟ’, ‘ಕಿರಗೂರಿನ ಗಯ್ಯಾಳಿಗಳು’ ಸಿನಿಮಾಗಳಲ್ಲಿ ತಮ್ಮ ದಿಟ್ಟ ಅಭಿಯನದಿಂದ ಗುರುತಿಸಿಕೊಂಡಿರುವ ನಟಿ ಸುಕೃತಾ ವಾಗ್ಲೆ ಸದ್ಯ ಪಾತ್ರ ಪ್ರಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈಚೆಗೆ ‘ಮ್ಯಾಕ್ಸ್’ ಹಾಗೂ ಡಾರ್ಕ್‌ನೆಟ್ ಥ್ರಿಲ್ಲರ್ ‘ಕಪಟಿ’ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದು, ಹೊಸ ಹೊಸ ಪಾತ್ರಗಳನ್ನು ಅನ್ವೇಷಿಸುತ್ತಿದ್ದಾರೆ.

ಕನ್ನಡ ಸಿನಿಮಾದಲ್ಲಿನ ಚೌಕಟ್ಟಿನ ಬಗ್ಗೆ ಮಾತನಾಡಿರುವ ಅವರು, ‘ಹೊಸ ಧಾಟಿಯ ಸ್ಕ್ರಿಪ್ಟ್‌ಗಳಲ್ಲಿ ನಾವು ಎದುರಿಸುವ ಬಹು ದೊಡ್ಡ ತೊಡಕು ಎಂದರೆ ಪ್ರೊಡಕ್ಷನ್ ಹೌಸ್‌ಗಳಿಂದ ಬೆಂಬಲ ದೊರೆಯದೇ ಇರುವುದು. ಈ ವಿಷಯದಲ್ಲಿಯೇ ಕನ್ನಡ ಸಿನಿಮಾರಂಗ ಹಿಂದುಳಿದಿರುವುದು’ ಎಂದು ವಿವರಿಸಿದ್ದಾರೆ.

‘ಮಲೆಯಾಳಂ ಸಿನಿಮಾರಂಗದವರು ಯಾವುದೇ ರೀತಿಯ ಪ್ರಯೋಗಕ್ಕೂ ತೆರೆದುಕೊಂಡಿದ್ದಾರೆ. ಆದರೆ ನಾವಿಲ್ಲಿ ಅಂಥ ಪ್ರಯೋಗಗಳನ್ನು ಮಾಡಲು ಪ್ರೋತ್ಸಾಹದ ಕೊರತೆಯಿಂದಾಗಿ ಹಿಂದಡಿ ಇಡುತ್ತೇವೆ. ವಾಸ್ತವ ಏನೆಂದರೆ, ಕಾಸ್ಮೊಪಾಲಿಟನ್ ಪ್ರೇಕ್ಷಕರು ಭಿನ್ನ ಭಿನ್ನ ಜಾನರ್‌ಗಳನ್ನು ಇಷ್ಟಪಡುತ್ತಾರೆ. ಹೀಗಿದ್ದಾಗ ಹೊಸತನಕ್ಕೆ ನಮ್ಮನ್ನು ಒಡ್ಡಿಕೊಳ್ಳಲೇಬೇಕಿದೆ’ ಎಂದಿದ್ದಾರೆ.

ಒಟಿಟಿಯಲ್ಲಿಯೂ ಕನ್ನಡ ಸಿನಿಮಾಗಳ ಹಿನ್ನಡೆ ಕುರಿತು ಮಾತನಾಡಿ, ‘ಬೇರೆ ಬೇರೆ ಭಾಷೆಗಳಿಗೆ ಹೋಲಿಸಿದರೆ, ಕನ್ನಡ ಭಾಷೆಯ ಸಿನಿಮಾಗಳು ಒಟಿಟಿ ವೇದಿಕೆಯಲ್ಲಿ ಪ್ರಬಲವಾಗಿಲ್ಲ. ನಮಗೆ ಪ್ರಯೋಗ ಮಾಡಲು ಇರುವ ಒಂದೇ ಅವಕಾಶ ಥಿಯೇಟರ್. ಹೀಗಿದ್ದಾಗ ಸೇಫ್ ಝೋನ್‌ಗೆ ಸವಾಲು ಹಾಕಿ ಬದಲಾವಣೆಗೆ ತೆರೆದುಕೊಳ್ಳಬೇಕು. ಪ್ರೇಕ್ಷಕರು ಬದಲಾಗುತ್ತಿದ್ದಾರೆ, ಅದಕ್ಕೆ ತಕ್ಕಂತೆ ಸಿನಿಮಾರಂಗ ಕೂಡ ಬದಲಾಗಬೇಕಿರುವುದು ಅನಿವಾರ್ಯ’ ಎಂದಿದ್ದಾರೆ. ■